# ಶರೀರ ಒಂದೇ, ಮುಖಗಳು ಮೂರು

ನಂಜನಗೂಡು ತಾಲ್ಲೂಕಿನಲ್ಲಿರುವ ಹೆಮ್ಮರಗಾಲ ಗ್ರಾಮದಲ್ಲಿ ಶ್ರೀ ಕೌಂಡಿನ್ಯ ಋಷಿಗಳು ಸ್ಥಾಪಿಸಿದ ಶ್ರೀ ಸಂತಾನ ವೇಣು ಗೋಪಾಲ ಸ್ವಾಮಿಯ ದೇವಾಲಯವಿದೆ. ಅಲ್ಲಿಯ ಒಂದು ಸ್ತಂಭದಲ್ಲಿ ಒಂದೇ ಶರೀರ, ಮೂರು ಮುಖಗಳ ಆಕಳಿನ ಶಿಲ್ಪವಿದೆ. ಆ ಮೂರು ಮುಖಗಳು ಮೂರು ಭಂಗಿಯಲ್ಲಿವೆ. ಒಂದು ಮುಖ ಕೆಚ್ಚಲಿನಲ್ಲಿ ಹಾಲು ಕುಡಿಯುತ್ತಿರುವ ಕರುವನ್ನು ಪ್ರೀತಿಯಿಂದ ನೆಕ್ಕುತ್ತಿದ್ದರೆ, ಇನ್ನೊಂದು ಮುಖ ಹುಲ್ಲನ್ನು ತಿನ್ನುತ್ತಿದೆ. ಮತ್ತೊಂದು ಆಕಾಶದೆಡೆಗೆ ಮುಖ ಮಾಡಿ ಆರ್ತನಾದಗೈಯುತ್ತಿದೆ.

**– ಸೀತಾ ಎಸ್. ನಾರಾಯಣ, ಹರಿಹರ**





# ಮಯೂರ ದೀಪಗಳ ಸ್ಟ್ಯಾಂಡ್

ನಿರುಪಯುಕ್ತವಾಗಿದ್ದ ಪಡ್ಡು ಮಾಡುವ ತವಾ 'ಮಯೂರ ದೀಪಗಳ ಸ್ಟ್ಯಾಂಡ್' ಆಗಿ ಪರಿವರ್ತಿತಗೊಂಡಾಗ ಕಂಡದ್ದು ಹೀಗೆ. ಫೆವಿಕ್ರಿಲ್ ಮೆಟಾಲಿಕ್ ಕಲರ್ಸ್, ಮಿನುಗುವ ಬಣ್ಣಗಳ ಸಣ್ಣ ತಂತಿ, ಮಣಿಗಳು, ನವಿಲುಗರಿ, ಚಿತ್ತಾರದ ಭರಣಿ ಉಪಯೋಗಿಸಿ ಒಂದಷ್ಟು ಕೈಚಳಕ ತೋರಿದ ನಂತರ ಸುಂದರವಾದ ದೀಪದ ಸ್ಟ್ಯಾಂಡ್ ಸಿದ್ಧವಾಯಿತು.

**– ಕೆ.ವಿ.ರಾಜಲಕ್ಷ್ಮಿ, ಬೆಂಗಳೂರು**

# ಕಲ್ಲಿನ ಆಟಿಕೆಗಳು

ಸುಮಾರು 60 ವರ್ಷಗಳ ಹಿಂದಿನ ಕಲ್ಲಿನ ಆಟಿಕೆಗಳ ಸೆಟ್ ಇದು. ಹಿರಿಯರಿಂದ ಈಗ ನನ್ನ ಮಗನಿಗೆ ಬರುವಷ್ಟರಲ್ಲಿ ಉಳಿದದ್ದು ಇಷ್ಟು. ಒಲೆ, ರಾಗಿ ಬೀಸುವ ಕಲ್ಲು, ಒರಳು (ರುಬ್ಬುಗುಂಡು ರಹಿತ ), ಅರೆಯುವ ಮಣೆ, ಒಂದಷ್ಟು ಪಾತ್ರೆಗಳು ಇನ್ನೂ ಮುಕ್ಕಾಗದೇ ಉಳಿದಿವೆ.

**– ಕಾವ್ಯ ಭಾರದ್ವಾಜ್, ಬೆಂಗಳೂರು**

